ಇ) ಸಕ್ಕರೆ ಕಾರ್ಖಾನೆಯ ಕಾರ್ಮಿಕರ ಹಾಗೂ ಕಬ್ಬು ಸರಬರಾಜು ಮಾಡಿದ ರೈತರ ಬಾಕಿ ಹಣವನ್ನು ಪಾವತಿ ಮಾಡಲಾಗುವುದೇ, ಹಾಗಿದ್ದಲ್ಲಿ, ಎಂದು ಪಾವತಿ ಮಾಡಲಾಗುವುದು?

ಶ್ರೀ ಶಿವರಾಜ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಹೌದು.

ಆ) ಕಾರ್ಖಾನೆಯನ್ನು ಈ ಹಿಂದೆ ಗುತ್ತಿಗೆ ಪಡೆದಿದ್ದ ಮೆ: ಕೊಥಾರಿ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿ., ರವರು ಗುತ್ತಿಗೆ ಒಪ್ಪಂದವನ್ನು ಖೈದುಗೊಳಿಸಿರುವ ಹಿನ್ನೆಲೆಯಲ್ಲಿ ಅವರು ಕಾರ್ಖಾನೆಗೆ ನೀಡಬೇಕಾಗಿರುವ ಬಾಕಿಗಳನ್ನು ಪಾವತಿಸಿದ್ದಲ್ಲಿ ಕಾರ್ಖಾನೆಯ ಗುತ್ತಿಗೆಯನ್ನು ಅಂತಿಮಗೊಳಿಸಬಹುದೆಂದು ತೀರ್ಮಾನಿಸಲಾಗಿರುತ್ತದೆ. ಅದರಂತೆ ಬಾಕಿ ಹಣ ಪಾವತಿಸಲು ಸೂಚನೆ ನೀಡುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಅವರು ಬಾಕಿ ಹಣ ಪಾವತಿ ಮಾಡಿದ ತಕ್ಷಣವೇ ಕಾರ್ಖಾನೆಯನ್ನು ಹೊಸದಾಗಿ ಗುತ್ತಿಗೆಗೆ ನೀಡಲು ಕ್ರಮ ಕೈಗೊಂಡು, 2010–2011ನೇ ಹಂಗಾಮಿನಿಂದ ಕಾರ್ಖಾನೆ ಪುನರಾರಂಭಕ್ಕೆ ಕ್ರಮ ವಹಿಸಲಾಗುವುದು.

ಇ) ಮೆ: ಕೊಥಾರಿ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿ., ಸಂಸ್ಥೆಯವರು ನೀಡಬೇಕಾಗಿರುವ ಬಾಕಿ ಮೊಬಲಗನ್ನು ಪಾವತಿ ಮಾಡಿದ ನಂತರ ಕಾರ್ಖಾನೆಯ ಕಾರ್ಮಿಕರ ವೇತನ ಪಾವತಿಸಲು ಕ್ರಮ ವಹಿಸಲಾಗುವುದು. ಅದರಂತೆಯೇ ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಬಾಕಿ ಹಣದ ಬಗ್ಗೆ ಕ್ರಮ ಕೈಗೊಳ್ಳಲು ಕಾರ್ಖಾನೆಗೆ ಸೂಕ್ತ ಸೂಚನೆ ನೀಡಲಾಗುವುದು.

ಸಕ್ಕರೆ ಕಾರ್ಖಾನೆಯ ಪುನಶ್ಚೇತನ

1028 (1081). ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಸಕ್ಕರೆ ಕಾರ್ಖಾನೆಯ ಪುನಶ್ಚೇತನಕ್ಕಾಗಿ ಸರ್ಕಾರ ಕ್ರಮ ಕೈಗೊಂಡಿರುವುದೇ?

ಆ) ಹಾಗಿದ್ದಲ್ಲಿ, ಇಲ್ಲಿಯವರೆವಿಗೆ ಖರ್ಚು ಮಾಡಿರುವ ಹಾಗೂ ಅಗತ್ಯವಿರುವ ಹಣವೆಷ್ಟು (ಪೂರ್ಣ ಮಾಹಿತಿ ನೀಡುವುದು)?

ಶ್ರೀ ಶಿವರಾಜ್ ಎಸ್.ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಸರ್ಕಾರವು, ಮಂಡ್ಯ ಸಕ್ಕರೆ ಕಾರ್ಖಾನೆಯ (ಮೈಶುಗರ್) ಪುನಃಶ್ಚೇತನಕ್ಕೆ ಕ್ರಮವನ್ನು ಈಗಾಗಲೇ ಕೈಗೊಂಡಿರುತ್ತದೆ.

ಆ) ಸರ್ಕಾರವು 2009–10ನೇ ಸಾಲಿನ ಆಯವ್ಯಯದಲ್ಲಿ ಕಾರ್ಖಾನೆಯ ಪುನಶ್ಚೇತನಕ್ಕಾಗಿ ರೂ.50.00 ಕೋಟಿಗಳನ್ನು ಒದಗಿಸಿದೆ. ಅದರಲ್ಲಿ, ಈಗಾಗಲೇ 3 ಹಂತಗಳಲ್ಲಿ ಒಟ್ಟು 25,72,11,240/– ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಬಿಡುಗಡೆಯದ ಹಣದಲ್ಲಿ ಖರ್ಚು ಮಾಡಲಾಗಿರುವ ಮೊತ್ತ ಈ ಕೆಳಕಂಡಂತೆ ಇರುತ್ತದೆ;

(ಕೋಟಿ ರೂ.ಗಳಲ್ಲಿ)

1) ಕಂಪೆನಿಯು ಕೆನರಾ ಬ್ಯಾಂಕಿನಿಂದ ಪಡೆಯಲಾಗಿದ್ದ ಡಿಬೆಂಚರ್ ಸಾಲ ಮರುಪಾವತಿಗಾಗಿ	16.17
2) ಕೋಜೆನ್, ಕೋಲ್, ಹ್ಯಾಂಡ್ಲಿಂಗ್, ಕೋಲ್ ಫೈರಿಂಗ್, ಟ್ರಾನ್ಸ್ ಫಾರ್ಮರ್, ಸ್ಟೇ ಪಾಂಡ್, ಕೇನ್ ಕಟ್ಟರ್ ಸಾಧನಗಳನ್ನು ಅಳವಡಿಸಲು ಇಲ್ಲಿಯವರೆಗೆ ಖರ್ಚು ಮಾಡಲಾದ ಒಟ್ಟು ಮೊತ್ತ	4.45
ಒಟ್ಟು ಮೊತ್ತ	**20.62**

ಉಳಿದ ವಿವಿಧ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿರುತ್ತದೆ.

ಪರಿಷ್ಕರಿಸಿರುವ ಪುನಃಶ್ಚೇತನ ವರದಿಯ ಪ್ರಕಾರ ಅಗತ್ಯವಿರುವ ಹಣದ ವಿವರ ಈ ಕೆಳಕಂಡಂತಿರುತ್ತದೆ.

(ಕೋಟಿ ರೂ.ಗಳಲ್ಲಿ)

ಅ) ಮಿಲ್ ಮತ್ತು ಬಾಯ್ಲಿಂಗ್ ಹೌಸ್‌ನ ನವೀಕರಣಕ್ಕಾಗಿ (ಹಾಲಿ ಇರುವ ಉಪಕರಣಗಳ ರೀಕಂಡೀಷನಿಂಗ್ ಮತ್ತು ತೆರಿಗೆಗಳು ಸೇರಿ)	58.60
ಆ) ಕೋಜನರೇಷನ್ (ಕೋಲ್ ಹ್ಯಾಂಡ್ಲಿಂಗ್ ಮತ್ತು ಫೈರಿಂಗ್, ಸರಬರಾಜುದಾರರ ಬಾಕಿ, ಇತ್ಯಾದಿ)	14.50
3) 2010–11ನೇ ಸಾಲಿನ ನಿಲುಗಡೆ ಅವಧಿಯ ದುಡಿಮೆ ಬಂಡವಾಳ	06.20
ಒಟ್ಟು ಅಗತ್ಯವಿರುವ ಮೊತ್ತ	**79.30**